ಆಶ್ಚರ್ಯದ ಮುಖ ಭಾವ ಮಾಯವಾಗಿತ್ತು.

'ಒಳಗೆ ಬನ್ನಿ' ಎಂದಳು. ಕುರ್ಚಿ ಹಾಕಿದವಳು 'ಕಾಫಿ ಮಾಡುತ್ತೇನೆ' ಎಂದು ಅಡಿಗೆ ಕೋಣೆಗೆ ಹೋದಳು. ನಾನು ಕಾರವಾರದಿಂದ ಎಂದ ಕೂಡಲೇ ದಿವಾಕರನ ಸ್ನೇಹಿತನೆಂದು ಅವಳಿಗೆ ಗೊತ್ತಾಗಿರಬೇಕು. ಇವಳಲ್ಲಿ ದಿವಾಕರನ ಸಾವನ್ನು ಹೇಗೆ ಬಿತ್ತರಿಸುವುದು.

'ಏಕೆ ಅವರಿಗೆ ಮೈ ಹುಷಾರಿಲ್ಲವೆ?' ಕಾಫಿ ಹೀರುತ್ತಾ ಕೇಳಿದಳು.

'ಅವನು ಸತ್ತು ಹೋದ' ನಿರ್ವಿಕಾರವಾಗಿ ಏನೂ ತೋಚದೆ ಹೇಳಿದ್ದೆ.

ಒಡನೆ ಅವಳ ಮುಖ ಬಾಡಿತು. ನೋವಿನಿಂದ ನಿರ್ಲಿಪ್ತಳಾದವಳ ಕಣ್ಣಲ್ಲಿ ನೀರು ಹನಿಗೂಡಿದ್ದವು.

'ಹೀಗಾಗುತ್ತದೆಂದು ನಾನು ಊಹಿಸಿದ್ದೆ' ನಿರ್ಲಿಪ್ತಳಾಗಿಯೇ ಹೇಳಿ ನನ್ನನ್ನು ಆಶ್ಚರ್ಯಗೊಳಿಸಿದ್ದಳು.

'ಕ್ಷಮಿಸಿ, ದಿವಾಕರ ನಿಮಗೇನಾಗಬೇಕೆಂದು ಕೇಳಬಹುದೆ?'

'ಅವರು ಹೇಳಿರಲಿಲ್ಲವೆ?'

'ನಿಮ್ಮ ಬಗ್ಗೆ ಯಾವ ವಿಷಯವನ್ನೂ ಹೇಳಿರಲಿಲ್ಲ. ಅದೂ ನಾಡಕರ್ಣಿಯವರು ಹೇಳಿದ ಮೇಲೆ ನಿಮ್ಮ ಅಡ್ರಸ್ಸು ಕೂಡ ಗೊತ್ತಾದದ್ದು...'

'ಯಾರು ನಾಡಕರ್ಣಿ?' ಅವಳು ಪ್ರಶ್ನಿಸಿದಳು. ನಾನು ಸುಮ್ಮನಿದ್ದೆ.

'ಅವರೆಂದೂ ತಮ್ಮ ಸ್ನೇಹಿತರ ಬಗ್ಗೆ ಹೇಳುತ್ತಿರಲಿಲ್ಲ.'

'ತಾವು ಯಾರ್‍ಯಾರು ಮನೆಯಲ್ಲಿದ್ದೀರಿ?...' ಎಂದು ಏಕಾಏಕಿ ಪ್ರಶ್ನಿಸಿದ್ದೆ.

'ನಾನು ಮತ್ತು ಅದೋ ಆ ಮಗು' ಮಂಚದ ಮೇಲೆ ನಿದ್ರಿಸುತ್ತಿದ್ದ ಮಗುವನ್ನು ತೋರಿಸುತ್ತಾ ಹೇಳಿದಳು. ಮತ್ತೆ ಮೌನ.

'ದಿವಾಕರ ನನಗೇನಾಗಬೇಕೆಂದು ಕೇಳಿದಿರಾ? ಅದೋ ನೋಡಿ ಆ ಮಗು. ಅದೇ ಉತ್ತರ. ಒಂದು ರೀತಿಯಲ್ಲಿ ನಾವು ಗಂಡಹೆಂಡಿರು. ದಿವಾಕರ ನನ್ನ ಕ್ಲಾಸ್‌ಮೇಟ್. ಪರಿಚಯ ಗೆಳೆತನವಾಗಿ, ಗೆಳೆತನ ಸಂಬಂಧವಾಗಿ... ಹೀಗೆ... ಆದರೆ ನಾವು ಯಾವ ರೀತಿಯಲ್ಲೂ ಮದುವೆಯಾಗಿರಲಿಲ್ಲ. ಆದರೂ ನಾವು ಗಂಡಹೆಂಡತಿ' ಮೌನದಾಳದಿಂದ ಮಾತುಗಳು ಕೇಳಿ ಬರುತ್ತಿದ್ದವು.

'ನಿಮ್ಮನ್ನು ಅವನು ಭೇಟಿಯಾಗಿ ಎಷ್ಟು ದಿನವಾಯಿತು?'

'ಒಂದೂವರೆ ತಿಂಗಳ ಮೇಲಾಯಿತು. ತಿಂಗಳಿಗೊಮ್ಮೆ ಬರುತ್ತಿದ್ದರು. ರಾತ್ರಿ ಇಲ್ಲೇ ಕಳೆದು ಹೋಗುತ್ತಿದ್ದರು. ಅದಕ್ಕೆ ಸಾಕ್ಷಿಯೇ ಆ ಮಗು' ಮಲಗಿದ್ದ ಮಗುವಿನ ಕಡೆ ಅವಳ ಕಣ್ಣು ಹೊರಳಿದಾಗ ಕಣ್ಣಂಚಿನಲ್ಲಿ ನೀರು.

'ದಿವಾಕರನ ತಂದೆ–ತಾಯಿಗಳು ನಿಮಗೆ ಗೊತ್ತೆ? ಅವನ ಊರಿಗೆ ಎಂದಾದರೂ ಹೋಗಿದ್ದಿರಾ?'

'ಇಲ್ಲ... ಆ ಬಗ್ಗೆ ಪ್ರಶ್ನಿಸಲೇ ಬೇಡವೆಂದು ಹೇಳಿದ್ದ' ಮಾತುಗಳಲ್ಲಿ ನಾಟಕೀಯವಿರಲಿಲ್ಲ.

'ದಿವಾಕರ ಸತ್ತದ್ದು ನಿಮಗೆ ನಷ್ಟವಾಗಲಿಲ್ಲವೆ?' ಈ ಪ್ರಶ್ನೆಗೆ ಅವಳು ಸ್ವಲ್ಪ ತಡೆದು ಹೇಳಿದಳು: 'ಎಂತಹ ಪ್ರಶ್ನೆ ನಿಮ್ಮದು. ಈ ಪ್ರಶ್ನೆಗೆ ಉತ್ತರಿಸಲಾರೆ. ಈ ಮಧ್ಯೆ ಅವನು ಒಂದು ಯಂತ್ರದಂತೆ ವರ್ತಿಸುತ್ತಿದ್ದ. ಅವನು ಬಂದಾಗ ಬಿಚ್ಚಿಕೊಳ್ಳುತ್ತಿದ್ದೆ. ಆರ್ಥಿಕವಾಗಿ ಅವನ ಸಹಾಯವನ್ನು ನಾನು ಅಪೇಕ್ಷಿಸುತ್ತಿರಲಿಲ್ಲ. ಆದರೂ ತನಗಿಷ್ಟ ಬಂದ ಸಾಮಾನುಗಳನ್ನು